**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 584/2024 |
| ಸಿ.ಡಬ್ಲೂ | - 07 |
| ಪಿ.ಡಬ್ಲೂ | - 02 |
| ಸಾಕ್ಷಿಯ ಹೆಸರು | - ಪರಶುರಾಮ ಬಾಬು ಗುಂಜೆ |
| ವಯಸ್ಸು | - 38 ವರ್ಷ |
| ಉದ್ಯೋಗ | - ಖಾಸಗಿ ಕೆಲಸ |
| ವಾಸ ಸ್ಥಳ | - ವಿಜಯಪೂರ |

ದಿನಾಂಕಃ 12/06/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯ ಇದೆ. ಚಾಸಾ-1, 8 ರಿಂದ 12 ರವರ ಪರಿಚಯವಿಲ್ಲ. ಮೃತ ಶಶಿಕಾಂತಗೌಡ ಸೋಮನಗೌಡ ಮುನೇನಕೊಪ್ಪ ರವರ ಪರಿಚಯವಿಲ್ಲ.

2020 ರಲ್ಲಿ ಒಂದು ದಿನ ನಾನು, 1 ನೇ ಆರೋಪಿ ಹಾಗೂ ಶ್ರೀಕಾಂತ ರಾಥೋಡ ರವರು ನ್ಯಾನೋ ಕಾರ್ ನಲ್ಲಿ ವಿಜಯಪೂರದಿಂದ ಹುಬ್ಬಳ್ಳಿಗೆ ಹೋಗುತ್ತಿರುವಾಗ ನರಗುಂದ-ನವಲಗುಂದ ರಸ್ತೆಯಲ್ಲಿ ರಾ.08.30 ಘಂಟೆಗೆ ನಾನು ಕಾರ್ ನಲ್ಲಿ ಮಲಗಿಕೊಂಡಾಗ ಅಪಘಾತವಾಗಿರುತ್ತದೆ. ಸದರಿ ಅಪಘಾತ ಯಾವ ರೀತಿ ಹಾಗೂ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಸದರಿ ಅಪಘಾತದಿಂದ ನನ್ನ ಹಣೆಗೆ ಗಾಯಗಳಾಗಿರುತ್ತವೆ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೆ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿನಾಂಕಃ 18-08-2020 ರಂದು ರಾ.07.30 ಗಂಟೆಗೆ 1 ನೇ ಆರೋಪಿ ಚಲಾಯಿಸುತ್ತಿದ್ದ ಟಾಟಾ ನ್ಯಾನೋ ಕಾರ್ ಸಂಃ AP-16/BM-7559 ನೇದ್ದನ್ನು ನರಗುಂದ ಕಡೆಯಿಂದ ನವಲಗುಂದ ಕಡೆಗೆ ಅತೀ ವೇಗ ಹಾಗೂ ಅಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯಕಾರಿಯಾಗುವ ರೀತಿಯಲ್ಲಿ ಚಲಾಯಿಸಿ ಕಚ್ಚಾ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಚಾಸಾ-1 ರವರ ಮಾವನಾದ ಶಶಿಕಾಂತಗೌಡ ಸೋಮನಗೌಡ ಮುನೇನಕೊಪ್ಪ ರವರಿಗೆ ಅಪಘಾತ ಪಡಿಸಿದ್ದರಿಂದ ಸದರಿಯವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ 1 ನೇ ಆರೋಪಿಯ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ 2 ಬಾರಿ ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗಗಳನ್ನು **ನಿಪಿ-3** ಮತ್ತು **ನಿಪಿ-4** ಎಂದು ಗುರುತಿಸಲಾಯಿತು. 1 ನೇ ಆರೋಪಿ ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್ ಎಚ್ ಆರ್ ವಕೀಲರಿಂದಃ**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**